


# ವಿಕ್ರಾಂತ್ ರೋಣನ ಆರೋಹಣ

**ಕೆ.ಜಿ.ಎಫ್ ಸಿನಿಮಾದ ನಂತರ ಉತ್ತರದ ಜನರ ಮನಸಲ್ಲಿ ಕನ್ನಡ ಸಿನಿಮಾಗಳ ಬಗ್ಗೆ ಹುಟ್ಟಿರುವ ನಿರೀಕ್ಷೆಯ ವಜ್ಜೆಯನ್ನು ಬೆನ್ನಮೇಲೆ ಹೊತ್ತುಕೊಂಡೇ 'ವಿಕ್ರಾಂತ್ ರೋಣ' ತೆರೆಗೆ ಬರುತ್ತಿದೆ.**

■ **ಪದ್ಮನಾಭ ಭಟ್**

ಸುದೀಪ್ ಅಭಿನಯದ 'ವಿಕ್ರಾಂತ್ ರೋಣ' ಸಿನಿಮಾದ ಬಿಡುಗಡೆಗೆ ಜುಲೈ 28ರಂದು ಮುಹೂರ್ತ ನಿಕ್ಕಿ ಮಾಡಲಾಗಿದೆ. ಸದ್ಯಕ್ಕೆ ಕನ್ನಡದ ಬಹುನಿರೀಕ್ಷಿತ ಚಿತ್ರಗಳ ಸಾಲಿನಲ್ಲಿ 'ವಿಕ್ರಾಂತ್' ಮುಂಚೂಣಿಯಲ್ಲಿದ್ದಾನೆ. ಪ್ರಾರಂಭದಿಂದಲೂ ಸುದ್ದಿ ಮಾಡುತ್ತಲೇ ಬಂದಿರುವ ಈ ಸಿನಿಮಾ, ಇತ್ತೀಚೆಗೆ ಸುದೀಪ್ ಮತ್ತು ಬಾಲಿವುಡ್ ನಟ ಅಜಯ್ ದೇವಗನ್ ಮಾತಿನ ಚಕಮಕಿಯ ಕಾರಣದಿಂದಲೂ ಮತ್ತಷ್ಟು ಹೊಳಪು ಹೆಚ್ಚಿಸಿಕೊಂಡಿದೆ.

ಅನೂಪ್ ಭಂಡಾರಿ ಈ ಚಿತ್ರದ ನಿರ್ದೇಶಕರು. 'ರಂಗಿ ತರಂಗ' ಸಿನಿಮಾ ಮೂಲಕ ಇಡೀ ಚಿತ್ರರಂಗವೇ ತಮ್ಮತ್ತ ಹೊರಳಿ ನೋಡುವಂತೆ ಮಾಡಿದ ಅನೂಪ್ ನಿರ್ದೇಶನದ ಎರಡನೇ ಸಿನಿಮಾ 'ರಾಜರಥ' ಬಾಕ್ಸ್ ಆಫೀಸ್‌ನಲ್ಲಿ ಗೆಲುವಿನ ಗದ್ದುಗೆ ಮುಟ್ಟಲು ಸಾಧ್ಯವಾಗಿರಲಿಲ್ಲ. ಈಗ ಸುದೀಪ್ ಅವರನ್ನು ನಾಯಕನನ್ನಾಗಿಸಿಕೊಂಡು 'ವಿಕ್ರಾಂತ್ ರೋಣ' ಸಿನಿಮಾ ಮಾಡಿರುವ ಅನೂಪ್, ದೇಶದಾದ್ಯಂತ ಚಿತ್ರ ಬಿಡುಗಡೆ ಮಾಡಿ ಗೆಲುವು ದಾಖಲಿಸುವ ಉತ್ಸಾಹದಲ್ಲಿದ್ದಾರೆ.

ಆರಂಭದಲ್ಲಿ ಈ ಚಿತ್ರಕ್ಕೆ 'ಪ್ಯಾಂಟಮ್' ಎಂದು ಹೆಸರಿಡಲಾಗಿತ್ತು. ನಂತರ 'ವಿಕ್ರಾಂತ್ ರೋಣ' ಎಂದು ಬದಲಾಯಿಸಲಾಯಿತು. ಹಾಗೆ ನೋಡಿದರೆ ವರ್ಷದ ಹಿಂದೆ ಅಂದರೆ 2021ರ ಆಗಸ್ಟ್‌ನಲ್ಲಿಯೇ ಈ ಚಿತ್ರ ತೆರೆಯ ಮೇಲೆ ಬರಬೇಕಾಗಿತ್ತು. ಆದರೆ ಕೋವಿಡ್ ಮಾರ್ಗಸೂಚಿಯ ಕಾರಣದಿಂದ ಚಿತ್ರ ಬಿಡುಗಡೆಯನ್ನು ಮುಂದೂಡುತ್ತಲೇ ಬಂದ ಚಿತ್ರತಂಡ ಕೊನೆಗೂ 'ವಿಕ್ರಾಂತ್' ನನ್ನು ಅಭಿಮಾನಿಗಳ ಎದುರಿಗೆ ಕಳಿಸಲು ಮುಂದಾಗಿದೆ.

'ಕೆ.ಜಿ.ಎಫ್' ಸಿನಿಮಾದ ಗೆಲುವಿನ ದೂಳು ಬಾಲಿವುಡ್ ಅಂಗಳದಲ್ಲಿ ಇನ್ನೂ ಆರಿಲ್ಲ.